# 'ಸುಧಾ' ಜೊತೆಗಿನ ಓದುಗರ ಒಡನಾಟ

### ಮತ್ತೆ 'ಸುಧಾ'ದತ್ತ...

50 ವರ್ಷಗಳ ಹಿಂದಿನ ಮಾತು. ನಾನು ಶಾಲೆಗೆ ಹೋಗುತ್ತಿದ್ದ ಸಮಯ. ಆಗ ನಮ್ಮ ಮನೆಯಲ್ಲಿ ಟೀವಿ ಇರಲಿಲ್ಲ. 'ಸುಧಾ' ಧಾರಾವಾಹಿ ಓದಲು ನಮ್ಮ ಮನೆಯಲ್ಲಿ ಅಕ್ಕ ತಂಗಿಯರ ದೊಡ್ಡ ಜಗಳ. ಈ ನಡುವಲ್ಲಿ ನಾನಂತೂ ಸಿನಿಮಾ ಪುಟವನ್ನು ಒಂದಕ್ಷರವೂ ಬಿಡದೆ ಓದುತ್ತಿದ್ದೆ. ಟೀವಿ ಬಂದ ಮೇಲೆ ಪತ್ರಿಕೆ ಹುಚ್ಚು ಕಮ್ಮಿಯಾಗಿತ್ತು. ಕೆಲಸದ ನಿಮಿತ್ತ ಮೈಸೂರಿನ ದಾರಿ ಹಿಡಿದಿದ್ದೆ. ಇತ್ತೀಚೆಗೆ ನಿವೃತ್ತಿಯಾದ ಮೇಲೆ ಪುನಃ 'ಸುಧಾ' ಓದಲು ಶುರು ಮಾಡಿದೆ. ಮತ್ತೆ ಓದಲು, ಬರೆಯಲು ಆಸಕ್ತಿಯೂ ಹೆಚ್ಚಾಗಿದೆ.

—ಮಾಧವ ಉದ್ಯಾವರ, ಮೈಸೂರು

### ಅಮರವಾಗಲಿ ನಮ್ಮ ಬಂಧ

ನನಗೂ 'ಸುಧಾ'ಳಿಗೂ 40 ವರ್ಷಗಳ ಅನುಬಂಧ. ಧಾರಾವಾಹಿ, ಕಥೆಗಳನ್ನು ಓದಿ, ಅದರ ಸ್ವಾರಸ್ಯವನ್ನು ಹೀರಿ ಧಾರಾವಾಹಿಗಳ ಅಂತ್ಯದಲ್ಲಿ ಬರುತ್ತಿದ್ದ 'ಸಶೇಷ' ಎಂಬ ಪದಕ್ಕೆ ಅರ್ಥ ಗೊತ್ತಿಲ್ಲದೆ ಆ ಪದದಿಂದ ನಾನು 'ರತ್ನಕೋಶ' ನೋಡುವುದನ್ನು ಕಲಿತೆ. ಅದರ ಅಭ್ಯಾಸ ಬೆಳೆಸಿಕೊಂಡೆ. 'ಸುಧಾ'ದಲ್ಲಿ ಬರುತ್ತಿದ್ದ ವೈವಿಧ್ಯಮಯ ತಿನಿಸುಗಳ ಮಾಹಿತಿಯನ್ನು ಡೈರಿಯಲ್ಲಿ ಬರೆದು ನನ್ನ ತಂದೆಯವರು ನನಗೆ ಉಡುಗೊರೆಯಾಗಿ ಕೊಟ್ಟಿದ್ದಾರೆ. ನಾನು ಇಂದಿಗೂ ಅದರ ಉಪಯೋಗ ಪಡೆಯುತ್ತಿದ್ದೇನೆ. ಈ ಬಂಧ ಅಮರವಾಗಿರಲಿ ಎಂದು ಆಶಿಸುತ್ತೇನೆ.

—ಗಾಯತ್ರಿ ಸ್ವಾಮಿ

### ಮನೆ-ಮನ ತುಂಬಿದ 'ಸುಧಾ'...

ವರ್ಷಕ್ಕೊಮ್ಮೆ 2 ತಿಂಗಳು ಬೇಸಿಗೆ ರಜೆಗೆಂದು ಮೂಡಬಿದಿರೆಯ ಸಮೀಪದ ನಮ್ಮಜ್ಜಿಯ ಮನೆಗೆ ಹೋದಾಗ ವರ್ಷದ ಸಂಪೂರ್ಣ 'ಸುಧಾ' ಪತ್ರಿಕೆಗಳನ್ನು ನಾನು ತಾನು ಎಂದು ತೆರೆದು ಬೂಜ, ಡಾಬೂ, ಮಜನೂ ಹಾಗೂ ಫ್ಯಾಂಟಮ್ ಓದಿ ಆನಂದಿಸುತ್ತಿದ್ದೆವು ನಾವು. ತಿಳಿವಳಿಕೆ ಬಂದ ಮೇಲೆ ನಮ್ಮನ್ನು ಆಕರ್ಷಿಸಿದ್ದು ನೀವು ಕೇಳಿದಿರಿ, ಪದಬಂಧ, ಜೊತೆಗೆ ಪರಿಸರದ ಕುರಿತ ವೈಜ್ಞಾನಿಕ ಲೇಖನಗಳು. ಇಂದಿಗೂ 'ಸುಧಾ' ನಮ್ಮೆಲ್ಲರ ಮನಗಳಲ್ಲಿ ತುಂಬಿದ್ದಾಳೆ.

—ಬಿ.ಸಂ. ಸುಬ್ಬಣ್ಣ, ಬೆಂಗಳೂರು

### ಬೆಳವಣಿಗೆ ನಿರಂತರವಿರಲಿ

ನನ್ನ ಪ್ರೀತಿಯ ಪತ್ರಿಕೆ 'ಸುಧಾ'. ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ ಸಾಕಷ್ಟು ಧಾರಾವಾಹಿಗಳನ್ನು ಓದಿದ್ದೇನೆ, ಅವುಗಳನ್ನು ಸಂಗ್ರಹಿಸಿಟ್ಟಿದ್ದೇನೆ ಕೂಡ. ಧಾರಾವಾಹಿ ಮಾತ್ರವಲ್ಲ, ನಗು ಉಕ್ಕಿಸುವ 'ನಕ್ಕುಬಿಡಿ' ಅಂಕಣವನ್ನೂ ಸಂಗ್ರಹಿಸಿ ಇಟ್ಟುಕೊಂಡಿದ್ದೇನೆ. 'ಸುಧಾ' ಬೆಳವಣಿಗೆ ನಿರಂತರವಾಗಿರಲಿ ಎಂಬುದು ನನ್ನ ಹಾರೈಕೆ.

—ಮಹಂತೇಶ್ ಪಾಟೀಲ್, ಹುನಗುಂದ

### ಜಾತಿ ಮೀರಲು ಸ್ಫೂರ್ತಿ

'ಸುಧಾ' ಆರಂಭವಾದ ದಿನಗಳಲ್ಲಿ ನಾವು ಬಳ್ಳಾರಿಯಲ್ಲಿದ್ದೆವು. ಬಳ್ಳಾರಿಯಿಂದ ಬೆಂಗಳೂರಿಗೆ ಸ್ಥಳಾಂತರಗೊಂಡ ಬಳಿಕವೂ 'ಸುಧಾ' ಮೇಲಿನ ಒಲವು ಕಡಿಮೆಯಾಗಲಿಲ್ಲ. ಈಗ ಪತ್ರಿಕೆಗೆ 60ರ ಸಂಭ್ರಮ. ಇಂತಹ ಹಲವು ಸಂಭ್ರಮಗಳನ್ನು 'ಸುಧಾ' ಸಂಭ್ರಮಿಸಲಿ ಎಂದು ಹಾರೈಸುವೆ.

ಪತ್ರಿಕೆ ಶುರುವಾದಾಗ ಡಾ. ಅನುಪಮಾ ನಿರಂಜನ ಅವರ 'ಸ್ನೇಹ ಪಲ್ಲವಿ' ಕಾದಂಬರಿಯನ್ನು ಪ್ರಕಟಿಸಿತು. ಇದು 'ಸುಧಾ'ದಲ್ಲಿ ಪ್ರಕಟಗೊಂಡ ಮೊದಲ ಕಾದಂಬರಿ. ಆ ಕಾದಂಬರಿ ಓದಿನ ಅನುಭವ ಇನ್ನೂ ನನ್ನ ಕಣ್ಣಲ್ಲಿ ಅಚ್ಚಳಿಯದಂತೆ ಉಳಿದಿದೆ. ಅಲ್ಲಿಂದ ಶುರುವಾದ ನಂಟು ಇನ್ನೂ ಮುಂದುವರೆದಿದೆ. ಅನುಪಮಾ ನಿರಂಜನ ಸೇರಿದಂತೆ ಹಲವಾರು ಲೇಖಕರ ಬರಹಗಳಿಂದ ಸ್ಫೂರ್ತಿಗೊಂಡಿದ್ದೇನೆ.

ಒಮ್ಮೆ ಅಂತರ್ಜಾತಿ ವಿವಾಹದ ಬಗ್ಗೆ ಲೇಖನ ಪ್ರಕಟಗೊಂಡಿತ್ತು. ಲೇಖಕಿಯ ಸ್ವಂತ ಅನುಭವದಿಂದ ಕೂಡಿದ ಬರಹ ಅದಾಗಿತ್ತು. ವಿದೇಶಕ್ಕೆ ಹೋಗಿದ್ದ ಲೇಖಕಿಯ ಮಗ ಅಲ್ಲಿನ ಯುವತಿಯೊಬ್ಬಳನ್ನು ಪ್ರೀತಿ ಮಾಡಿದ್ದ. ಅವರ ಮದುವೆಯಲ್ಲಿ ಲೇಖಕಿ ಹಾಗೂ ಅವರ ಕುಟುಂಬ ಸಂತೋಷದಿಂದ ಭಾಗಿಯಾಗಿ ಅಂತರ್ಜಾತಿ ವಿವಾಹ ನಡೆಸಿಕೊಟ್ಟಿದ್ದರ ಬಗ್ಗೆ ಆದರ್ಶವಾಗಿ ಲೇಖನ ಬರೆದಿದ್ದರು. ಆ ಲೇಖನದಿಂದ ಸ್ಫೂರ್ತಿಗೊಂಡ ನಾನು ಪ್ರೀತಿಯು ಜಾತಿ, ಧರ್ಮ ಮೀರಿದ್ದು ಎಂಬುದನ್ನು ಅರಿತುಕೊಂಡೆ.

ಕಾಕತಾಳೀಯವೋ ಎಂಬಂತೆ ನನ್ನ ಮಗನೂ ಅಂತರ್ಜಾತಿ ವಿವಾಹದ ಪ್ರಸ್ತಾಪವಿಟ್ಟ. ವಿವಾಹಕ್ಕೆ ನಮ್ಮ ಮನೆಯಲ್ಲಿ ಯಾವುದೇ ತಕರಾರು ವ್ಯಕ್ತವಾಗಲಿಲ್ಲ. ವಿವಾಹ ಮಾಡಿಸಿದೆವು. 'ಸುಧಾ'ದಲ್ಲಿ ಪ್ರಕಟಗೊಂಡಿದ್ದ ಆ ಲೇಖನವೇ ಈ ಬದಲಾವಣೆಗೆ ಸ್ಫೂರ್ತಿ.

—ರಾಜೇಶ್ವರಿ ಪ್ರಕಾಶ್, ಬೆಂಗಳೂರು

### ಮನಃಪೂರ್ವಕ ಅಭಿನಂದನೆಗಳು

ಸುಮಾರು ಐವತ್ತು ವರ್ಷದ ಹಿಂದೆ ನಾನು 'ಸುಧಾ' ಓದುಗನಾಗಿದ್ದು, ನನ್ನ ಅಣ್ಣ ಮನೆಗೆ ಪತ್ರಿಕೆ ತರುತ್ತಿದ್ದರು. ಪ್ರತಿ ವಾರ 'ಸುಧಾ' ತರುವುದನ್ನೇ ಕಾತರದಿಂದ ಕಾಯುತ್ತಿದ್ದೆ. ನಗೆ ಹನಿ, ನೀವು ಕೇಳಿದಿರಿ, ಕೃಷ್ಣಸ್ವಾಮಿ ಅವರ ವಾರದ ವ್ಯಕ್ತಿ, ಹಲವಾರು ಧಾರಾವಾಹಿಗಳು ಚೆನ್ನಾಗಿದ್ದವು.

ಬಹು ವರ್ಷಗಳ ಹಿಂದೆ ನಾನೂ 'ಸುಧಾ' ಸದಸ್ಯರ ಬಳಗದಲ್ಲಿ ಒಂದಾಗಿದ್ದೆ. ಅರವತ್ತು ವರ್ಷ ತುಂಬಿರುವ 'ಸುಧಾ'ಗೆ ಮನಃಪೂರ್ವಕ ಅಭಿನಂದನೆಗಳು.

—ಬಿ.ಕೆ. ಪ್ರಭುದೇವ ರಾಜೇ ಅರಸ್, ಮೈಸೂರು

### ನನ್ನ ಮೊದಲ ಕ್ರಶ್!

ಹೆಚ್ಚೂ ಕಡಿಮೆ ನನಗೂ 'ಸುಧಾ'ಳಿಗೂ ಒಂದೇ ಪ್ರಾಯ! ನನಗಿಂತ 4 ತಿಂಗಳು ದೊಡ್ಡವಳಾದರೂ 'ಸುಧಾ'ಳೇ ನನ್ನ ಮೊದಲ ಕ್ರಶ್! ಬುದ್ಧಿ ತಿಳಿದಂದಿನಿಂದ ನಾನಿವಳನ್ನು ಅತಿಯಾಗಿ ಹಚ್ಚಿಕೊಂಡಿದ್ದೇನೆ. ಶಾಲೆ, ಹೈಸ್ಕೂಲ್, ಕಾಲೇಜು ಹಂತಗಳಲ್ಲಿ ಲೈಬ್ರರಿಯಲ್ಲಿ ವಾರವಾರವೂ 'ಸುಧಾ'ಳಿಗಾಗಿ ಸಹಪಾಠಿಗಳೊಂದಿಗೆ ಸ್ಪರ್ಧೆಯಲ್ಲಿ ಕಾದು ಕೂತು ಮೊಟ್ಟಮೊದಲು ನಾನೇ ಓದುತ್ತಿದ್ದೆ. ಸಿಗದಾಗ ಹಳ್ಳಿಗಾಡು ನನ್ನೂರಿನಿಂದ ಕಾರ್ಕಳ ಪೇಟೆಗೆ ಹೋಗಿ ಬರುತ್ತಿದ್ದ ಪರಿಚಯದವರ ಮುಖಾಂತರ ತರಿಸಿ ಓದುತ್ತಿದ್ದೆ. ದುಬೈಯಲ್ಲಿ ಉದ್ಯೋಗ ನಿರತನಾಗಿದ್ದಾಗ ಕನ್ನಡ ಪುಸ್ತಕ ಲಭಿಸುತ್ತಿದ್ದ ಅಂಗಡಿಗೆ 'ಸುಧಾ' ಬರುವ ದಿನ ದೌಡಾಯಿಸುವುದು ಸಂಭ್ರಮದ ಸಂಗತಿಯಾಗಿತ್ತು!

1983ರಲ್ಲಿ ನನ್ನ ಮೊದಲ ಬರಹ 'ನಿಮ್ಮ ಪುಟದಲ್ಲಿ' ಪ್ರಕಟಗೊಂಡಾಗ ಸ್ವರ್ಗವೇ ಕೈಗೆ ಸಿಕ್ಕಷ್ಟು ಸಂತೋಷ! ಅದಾಗಿ 40 ವರ್ಷ ಸಂದರೂ ಈ ಅಂಕಣಕ್ಕೆ ಬರೆಯುತ್ತಲೇ ಬಂದಿದ್ದೇನೆ. ಯಂಡಮೂರಿ, ಕೆ.ಟಿ. ಗಟ್ಟಿ, ಬಿ.ಎಲ್. ವೇಣುರವರ ಧಾರಾವಾಹಿಗಳು ಕಾತರದಿಂದ ಕಾಯುವಂತಾಗಿಸಿದ್ದವು. ಕಥೆಗಳು ಮೊದಲ ಆದ್ಯತೆಯಾಗಿದ್ದವು. ಯುವ ದಿನಗಳಲ್ಲಿ ಕಾವ್ಯಸುಧಾ ಹಾಗೂ ಸಿನಿ ಪುಟದ ಸುಂದರಿಯರು ಮನರಂಜಿಸುತ್ತಿದ್ದರು. ಇಂದಿಗೂ ನಿಮ್ಮೊಡನೆ ಹಾಗೂ ಮುಖಪುಟ ಲೇಖನ ಸಮಕಾಲೀನ ಜ್ಞಾನವೃದ್ಧಿಯ ಆಗರಗಳಾಗಿವೆ. ಒಟ್ಟಿನಲ್ಲಿ ಸರ್ವಾಂಗ ಸುಂದರಿ 'ಸುಧಾ'ಳಿಗೀಗ 60 ಸಂದು ವಜ್ರ ಮಹೋತ್ಸವದ ಹೊಸ್ತಿಲಲ್ಲಿದ್ದರೂ, ಈಕೆಯಿನ್ನೂ ಪ್ರಥಮ ಸಂಚಿಕೆಯ ಅಮೃತ ಕಲಶದ ಮೋಹಿನಿಯಂತೆ ಚಿರಯೌವನೆ, ಪ್ರಬುದ್ಧೆ! ಇನ್ನಷ್ಟು ಜ್ಞಾನ, ಸೌಂದರ್ಯದೊಂದಿಗೆ 'ಸುಧಾ' ಸದಾ ವಿಜೃಂಭಿಸುತ್ತಿರಲಿ.

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ